ಜೆರುಸಲೇಂ ನಗರವನ್ನು ಪ್ರವೇಶಿಸುವಾಗ ಮುಸ್ಸಂಜೆ ಮುಗಿದು ಕತ್ತಲಾಗುತ್ತಿತ್ತು. ಪುಟ್ಟಪುಟ್ಟ ಬೆಟ್ಟಗಳ ಹೆಗಲ ಮೇಲೆ ನೆಲೆಸಿರುವ ನಗರ ದೀಪದ ಗೊಂಚಲನ್ನು ಹೊತ್ತುಕೊಂಡಂತೆ, ಒಮ್ಮೆ ಕಣಿವೆಯ, ಮತ್ತೊಮ್ಮೆ ಕೋಡಿನ ಮಗ್ಗುಲುಗಳನ್ನು ತೋರುತ್ತ ಝಗಝಗಿಸುತ್ತಿತ್ತು. ಜಗತ್ತಿನ ಅತಿ ಪ್ರಾಚೀನವೂ ಚಾರಿತ್ರಿಕ ಮಹತ್ವವೂ ಇರುವ ನಗರವೊಂದನ್ನು ಹಾದು ಹೋಗುತ್ತಿರುವ ಅರಿವಿನಿಂದ ಮೈಯೆಲ್ಲ ಕಣ್ಣಾಗಿ ಕುಳಿತಿದ್ದ ನಾನು ಭಾವುಕನಾಗಿದ್ದೆ.

ಜೆರುಸಲೇಂ ಒಳಗೊಂಡಂತೆ, ಈ ಭೂಭಾಗದ ಜೆರಿಕೊ, ಡಮಾಸ್ಕಸ್, ನಜರತ್, ಅಲೆಕ್ಸಾಂಡ್ರಿಯಾ, ಮಕ್ಕಾ, ಕೈರೊ, ರೋಂ, ಇಸ್ತಾನ್‌ಬುಲ್, ಹೆಬ್ರೊನ್, ಬಾಗ್ದಾದ್ ಎಲ್ಲವೂ ಕ್ರಿಸ್ತಪೂರ್ವ ಶತಮಾನಗಳಲ್ಲೇ ನಗರಗಳಾಗಿ ರೂಪುಗೊಂಡಂಥವು; ಅಧಿಕಾರ ಕೇಂದ್ರ, ವ್ಯಾಪಾರಿ ತಾಣ, ಧರ್ಮಕ್ಷೇತ್ರ ಮತ್ತು ಕಲೆಗಳ ಆಗರವಾಗಿ ಮೆರೆದಂತಹವು. ಜೆರುಸಲೇಮಿನ ಚರಿತ್ರೆಯಂತೂ ಕ್ರಿಸ್ತಪೂರ್ವ 89 ಶತಮಾನಗಳ ಹಿಂದಿನಿಂದ ಶುರು ವಾಗುತ್ತದೆ. ಕೆಲವು ವಿದ್ವಾಂಸರು ಇದರ ಪ್ರಾಚೀನತೆಯ ಹುಡುಕಾಟದಲ್ಲೇ ಜೀವಮಾನ ಕಳೆದಿದ್ದಾರೆ. ಜೆರುಸಲೇಂ ಅನ್ನು ನೋಡಿದರೆ, ಪ್ರಾಚೀನತೆಯನ್ನು ಒಡವೆಯನ್ನಾಗಿ ಧರಿಸಿದ ಆದಿಮ ನಾಗರಿಕತೆಯ ತಾಯಿಯಂತೆ, ಮನುಕುಲದ ಆದಿಮ ಚರಿತ್ರೆಯ ಪುಸ್ತಕವೊಂದರ ಕಳಚಿಬಿದ್ದ ಪುಟದಂತೆ ಭಾಸವಾಗುತ್ತದೆ.

'ಸೆಮೆಟಿಕ್ ಧರ್ಮಗಳಾದ ಯಹೂದಿ, ಕ್ರೈಸ್ತ, ಇಸ್ಲಾಂಗಳು ಒಂದೇ ಪೌರಾಣಿಕ ಮೂಲದಿಂದ ಹುಟ್ಟಿದವು. ಏಕದೇವತಾರಾಧಕವಾದ ಈ ಮೂರೂ ಧರ್ಮಗಳು ಲೋಕದ ಆದಿಮ ತಂದೆ–ತಾಯಿಗಳಾದ ಆಡಂ–ಈವರ ಮಿಥ್‌ಅನ್ನು ನಂಬುತ್ತವೆ. ಮೂರರ ಚರಿತ್ರೆಗಳೊಳಗೂ ಜೆರುಸಲೇಮಿನ ಉಲ್ಲೇಖಗಳಿವೆ. ಬೈಬಲ್ಲಿನ ಹಳೆ ಒಡಂಬಡಿಕೆಯಂತೂ ಜೆರುಸಲೇಮಿನ ಆತ್ಮಕಥೆ.

ಯಹೂದಿಗಳು ತಮ್ಮ ಧರ್ಮದ ಮೊದಲ ದೊರೆಗಳಾದ ಡೇವಿಡ್ ಮತ್ತು ಸಾಲೊಮನ್ನರು ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿದ ನಗರವೆಂದೂ, ದೇವರಾದ ಯೆಹೋವಾ ತಮಗೆ ಹರಸಿಕೊಟ್ಟ ಊರೆಂದೂ ನಂಬಿದ್ದಾರೆ. ಈಗಲೂ ಅವರಿಗೆ ಪವಿತ್ರವಾಗಿರುವ 'ಗೋಳಿನ ಗೋಡೆ' ಹಾಗೂ ಪೂರ್ವಜರ ಸಮಾಧಿಗಳು ಇಲ್ಲಿವೆ; ಕ್ರೈಸ್ತರಿಗೆ ಏಸು ವಿಚಾರಣೆಗೊಳಗಾದ, ಸೆರೆವಾಸ ಮಾಡಿದ, 'ಲಾಸ್ಟ್ ಸಪ್ಪರ್' ಪೂರೈಸಿದ, ಶಿಲುಬೆಗೇರಿದ ಮತ್ತು ಸಮಾಧಿಯಾದ ಊರು. ತಾಯಿ ಮೇರಿಯ ಸಮಾಧಿಯೂ ಇಲ್ಲಿದೆ. ಮುಸ್ಲಿಮರ ಪಾಲಿಗೆ ಪೈಗಂಬರ್ ಮಹಮದ್, ಹಿಂದಿನ ಪ್ರವಾದಿಗಳನ್ನು ಭೇಟಿ ಮಾಡಲು ಸ್ವರ್ಗಕ್ಕೆ ಹೋಗಿ ಬಂದ ಜಾಗ. ಕುರಾನ್ ಕೂಡ ಪೈಗಂಬರ್ ಪೂರ್ವದ ಯಹೂದಿಕ್ರೈಸ್ತರ ಪ್ರವಾದಿಗಳಾದ ಅಬ್ರಾಹಂ, ಇಸ್ಮಾಯಿಲ್, ಡೇವಿಡ್, ಮೋಸೆಸ್ ಜೋಸೆಫ್, ಏಸು ಮೊದಲಾದ ಪ್ರವಾದಿಗಳನ್ನು ಆದರದಿಂದ ಸ್ಮರಿಸುತ್ತದೆ. ಹೀಗಾಗಿಯೇ ಯಹೂದಿ, ಕ್ರೈಸ್ತರ ಪೌರಾಣಿಕ ವ್ಯಕ್ತಿಗಳ ಹೆಸರುಗಳು ತುಸು ರೂಪಾಂತರಗಳಲ್ಲಿ ಮುಸ್ಲಿಮರಲ್ಲಿವೆ. ಮೋಸೆಸ್ (ಮೂಸಾ), ಡೇವಿಡ್ (ದಾವೂದ್), ಸಾಲೊಮನ್ (ಸುಲೇಮಾನ್) , ಐಸಾಕ್ (ಇಸಾಕ್), ಜೇಕಬ್ (ಯಾಕೂಬ್), ಜೋಸೆಫ್ (ಯೂಸುಫ್), ಅಬ್ರಾಹಂ (ಇಬ್ರಾಹಿಂ), ಜೀಸಸ್ (ಈಸಾ), ಇಶ್ಮೇಲ್ (ಇಸ್ಮಾಯಿಲ್), ಮೇರಿ (ಮರಿಯಂ)– ಹೀಗೆ ಈ ಹೆಸರುಗಳನ್ನು ಪಟ್ಟಿ ಮಾಡಬಹುದು. ನಜರತ್‌ನಲ್ಲಿ ಒಂದು ಬ್ಯಾನರನ್ನು ಕಟ್ಟಲಾಗಿತ್ತು. ಅದರಲ್ಲಿ ಹೀಗಿತ್ತು: "ನಾವು ಮುಸ್ಲಿಮರಾದವರು ಅಲ್ಲಾಹನಲ್ಲಿ ವಿಶ್ವಾಸವಿಟ್ಟೆವು. ನಮಗೆ ದೇವರು ಕಳಿಸಿದ ಸಂದೇಶಗಳನ್ನು ಮಾತ್ರವಲ್ಲ, ಅಬ್ರಾಹಂ, ಇಸ್ಮಾಯಿಲ್, ಇಸಾಕ್, ಜೇಕಬ್, ಮೋಸೆಸ್ ಮತ್ತು ಈಸಾ ಮುಂತಾದ ಪ್ರವಾದಿಗಳಿಗೆ ದೇವರು ಕಳಿಸಿದ ಸಂದೇಶಗಳಲ್ಲಿಯೂ ವಿಶ್ವಾಸವಿಟ್ಟೆವು. ಇವರಲ್ಲಿ ತಾರತಮ್ಯ ಮಾಡೆವು (ಕುರಾನ್ 384)."

ಜೆರುಸಲೇಂ ಸೆಮೆಟಿಕ್ ಧರ್ಮಗಳ ಕೂಡಲ ಸಂಗಮ. ಇಲ್ಲಿ ಮೂರೂ ಧರ್ಮದವರ ವಸತಿಗಳಿವೆ. ಇಲ್ಲಿನ ಬೆಟ್ಟಗಳ ಮೇಲಿಂದ ನಗರದ ಯಾವ ಭಾಗಕ್ಕೆ ಕ್ಯಾಮೆರಾ ಇಟ್ಟು ಫೋಟೊ ತೆಗೆದರೂ, ಸಿನಗಾಗ್, ಚರ್ಚು, ಮಸೀದಿಗಳ ಶಿಖರಗಳು ಒಂದೇ ಫ್ರೇಮಿನೊಳಗೆ ಬರುತ್ತವೆ. ಜೆರುಸಲೇಮಿನ ಹೃದಯ ಭಾಗದಲ್ಲಿ ಕಣ್ಣೋರೈಸುವ ಚಿನ್ನದ ಹೊದಿಕೆಯ ಗುಮ್ಮಟವುಳ್ಳ ಕಟ್ಟಡ (ಡೂಂ ಆಫ್ ರಾಕ್) ಇದೆ. ಇದನ್ನು ಮೂರೂ ಧರ್ಮಗಳು ನಮ್ಮದೆಂದು ಭಾವಿಸುತ್ತವೆ. ಮೂರು ಧರ್ಮಗಳ ಪ್ರಮಥರ ಬದುಕಿಗೆ ಹೀಗೆ ಸಂಬಂಧಗೊಂಡು ಪವಿತ್ರವೆನಿಸಿದ ನಗರ ಭೂಮಂಡಲದಲ್ಲಿ ಇನ್ನೊಂದಿಲ್ಲ. ಹೀಗಾಗಿಯೇ ಇದು ವರ್ಷವಿಡೀ ಈ ತ್ರಿವಳಿ ಧರ್ಮಗಳ ಯಾತ್ರಾರ್ಥಿಗಳಿಂದ ತುಳುಕಾಡುತ್ತಿರುತ್ತದೆ.

ಜೆರುಸಲೇಮನ್ನು ಹಳತು ಹೊಸತು ಎಂದು ವಿಭಜಿಸಿ ಪ್ಯಾಲೆಸ್ಟೈನಿಗೂ, ಇಸ್ರೇಲಿಗೂ ಪಾಲು ಮಾಡಿಕೊಡಲಾಗಿದೆ. ಮೂಡಣ ದಿಕ್ಕಿನಲ್ಲಿರುವ ಭದ್ರಕೋಟೆಯೊಳಗೆ ನೆಲೆಸಿರುವ ಹಳೆನಗರದ ತುಂಬ ಮೋಹಕ ಕಟ್ಟಡಗಳಿವೆ. ಪಡುವಣ ಬೆಟ್ಟಗಳ ಹೆಗಲ ಮೇಲೆ ಬೆಳೆದಿರುವ ಹೊಸನಗರಲ್ಲಿ ಮೋಡಗಳನ್ನು ತೀಡುವ ಬಹುಅಂತಸ್ತಿನ ಉಪ್ಪರಿಗೆ ಕಟ್ಟಡಗಳು ಏಳುತ್ತಿವೆ. ಅಲ್ಲಿ ಇಸ್ರೇಲಿನ ಪಾರ್ಲಿಮೆಂಟು ಮಂತ್ರಾಲಯಗಳಿವೆ. ಹಳೆಯ ಹೊಸ ನಗರಭಾಗಗಳು ಒಂದರೊಳಗೊಂದು ಸೇರಿಕೊಂಡಿವೆ. ಶತಮಾನಗಳಷ್ಟು ಹಳೆಯದಾದ ಬೊಡ್ಡೆಗಳ ಮೇಲೆ ಹೊಸರೆಂಬೆಗಳನ್ನು ಹೊಮ್ಮಿಸುವ ಆಲಿವ್ ಗಿಡದಂತೆ. (ಇಂತಹ ಆಲಿವ್ ಗಿಡಗಳನ್ನು ಇಲ್ಲಿ ಕಾಪಿಡಲಾಗಿದೆ.) ಪ್ರಾಚೀನತೆ ಆಧುನಿಕತೆ ಬೆರೆತಿರುವ ಜೆರುಸಲೇಮ್ ಮೊಮ್ಮಕ್ಕಳ ಯೌವನವನ್ನು ಕಡವಾಗಿ ಪಡೆದು ಬದುಕುತ್ತಿರುವ ವೃದ್ಧನಂತೆ ತೋರುತ್ತದೆ.

ವಿಶೇಷವೆಂದರೆ ಇಲ್ಲಿನ ಕೈದೋಟಗಳು. ನಾವು ಹೋಗಿದ್ದು ವಸಂತ ಋತುವಾದ ಕಾರಣ, ಹತ್ತಾರು ಬಣ್ಣದ ಹೂತೊಟ್ಟಗಳಿಂದ ಮನೆ, ಸರ್ಕಲ್ಲು, ಹೋಟೆಲುಗಳು ನಳನಳಿಸುತ್ತಿದ್ದವು. ಕೈದೋಟದಲ್ಲಿ ದ್ರಾಕ್ಷಿ ಬಳ್ಳಿ, ಆಲಿವ್, ಬಾದಾಮಿ, ಅಂಜೂರದ ಗಿಡಗಳಿದ್ದವು. ಮದರಂಗಿ ಗಿಡವನ್ನು ಹೋಲುವ ಆಲಿವ್, ಅಡುವೆಣ್ಣೆ, ತಿನುಹಣ್ಣು, ಸೇವಿಸುವ ಮದ್ದು, ಪೂಸುವ ಸುಗಂಧ ಹೀಗೆ ಹಲವು ಜರೂರತ್ತಿಗೆ ಬೇಕಾದ ಪುಟ್ಟಗಿಡ. ಆಲಿವ್, ದ್ರಾಕ್ಷಿ, ಖರ್ಜೂರಗಳನ್ನು ಈ ಸೀಮೆಯ ಕಲ್ಪವೃಕ್ಷ ಕಲ್ಪಲತೆಗಳೆನ್ನಬಹುದು. ಇವು

**ಜೆರುಸಲೇಮಿನಲ್ಲಿ ಸದಾ ತಂಪು ಹವೆ. ಚಳಿಗಾಲದಲ್ಲಿ ಮೊಳಕಾಲುದ್ದ ಹಿಮ! ಅಲ್ಲಿಂದ ಕೇವಲ 30 ಕಿ.ಮೀ ದೂರದ 'ಡೆಡ್ ಸೀ' ಕಡೆಗೆ ಹೋದರೆ, ಚಿಗುರುಹುಲ್ಲೂ ಬೆಳೆಯದ ಬೋಳುಬೆಟ್ಟಗಳ ಮರುಭೂಮಿ!**

**ಹಳೆಯ ಆಲಿವ್ ಎಣ್ಣೆ ಗಾಣ ವೀಕ್ಷಣೆಯಲ್ಲಿ ಲೇಖಕರು**

